# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1616
ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ : 19.12.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಪೌಷ್ಟಿಕತೆ, ಶಿಕ್ಷಣ ಹಾಗೂ ಸಬಲೀಕರಣಕ್ಕಾಗಿ ಸರ್ಕಾರದಿಂದ ಹಮ್ಮಿಕೊಂಡಿರುವ ಪ್ರಮುಖ ಯೋಜನೆಗಳು ಮತ್ತು ಅವುಗಳ ಪ್ರಗತಿ ಏನು; | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br><br>ರಾಜ್ಯದಲ್ಲಿನ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಪೌಷ್ಟಿಕತೆ ಶಿಕ್ಷಣ ಹಾಗೂ ಸಬಲೀಕರಣಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಹಮ್ಮಿಕೊಂಡಿದ್ದು ಯೋಜನೆಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**<br><br>ರಾಜ್ಯದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಹಮ್ಮಿಕೊಂಡಿರುವ ಪ್ರಮುಖ ಯೋಜನೆಗಳು ಮತ್ತು 03 ವರ್ಷದ ಪ್ರಗತಿಯ ವಿವರವನ್ನು **ಅನುಬಂಧದ-2** ರಲ್ಲಿ ಒದಗಿಸಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಕೌಟುಂಬಿಕ ಹಿಂಸಾಚಾರ, ಲೈಂಗಿಕ ದೌರ್ಜನ್ಯಗಳ ಪ್ರಕರಣಗಳೆಷ್ಟು; ಮತ್ತು ಅದರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳ ಯಾವುವು; ಮತ್ತು ಮಹಿಳಾ ಆಯೋಗದ ಕಾರ್ಯಕ್ಷಮತೆ ಏನು; (ಮಾಹಿತಿ ನೀಡುವುದು) | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br><br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಳೆದ ಮೂರು ವರ್ಷಗಳಲ್ಲಿ ನೋಂದಣಿಯಾದ ಕೌಟುಂಬಿಕ ಹಿಂಸಾಚಾರ ಪ್ರಕರಣಗಳ ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಿದೆ.<br><br>ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ರಕ್ಷಿಸಲು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ 50 ಪ್ರತ್ಯೇಕ ಸಂರಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>**ಕರ್ನಾಟಕ ರಾಜ್ಯ ಮಹಿಳಾ ಆಯೋಗ**<br><br>ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ 31 ಜಿಲ್ಲೆಗಳಿಂದ ಕಳೆದ ಎರಡು ವರ್ಷಗಳಲ್ಲಿ ಸ್ವೀಕೃತಗೊಂಡ ಅರ್ಜಿಗಳ ಹಾಗೂ ಕಾರ್ಯಕ್ಷಮತೆಯ ವಿವರವನ್ನು **ಅನುಬಂಧ-4**ರಲ್ಲಿ ಒದಗಿಸಿದೆ. |

| | | |
|---|---|---|
| ಇ) | ರಾಜ್ಯದಲ್ಲಿ ಮಕ್ಕಳ ಶಿಕ್ಷಣ, ಬಾಲಕರ ಕೆಲಸ ವಿರೋಧ, ಬಾಲಕಿಯರ ಸುರಕ್ಷತೆ ಮತ್ತು ಬೇಸಾಯ ಕಾರ್ಯಕ್ರಮಕ್ಕೆ ಕಾರ್ಯಕ್ರಮಗಳಿಗೆ ಸರ್ಕಾರ ಯೋಜನೆಗಳ ಯಾವುವು ಮತ್ತು ಮಹಿಳಾ ಉದ್ಯೋಗ ನಿರ್ವಹಣೆ ಸ್ವಸಹಾಯ ಸಂಘಗಳ ಪ್ರೋತ್ಸಾಹ ಮತ್ತು ಆರ್ಥಿಕ ಸಹಾಯ ಯೋಜನೆಗಳಾವುವು? (ಮಾಹಿತಿ ನೀಡುವುದು) | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**<br><br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಮಕ್ಕಳ ಶಿಕ್ಷಣ, ಬಾಲಕಿಯರ ಸುರಕ್ಷತೆ ಮತ್ತು ಮಹಿಳೆಯರನ್ನು ಪ್ರೋತ್ಸಾಹಿಸಲು ಆರ್ಥಿಕ ಸಹಾಯಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>1. ಬಾಲಕಿಯರ ವಸತಿ ನಿಲಯಗಳು (ಸ್ವಯಂ ಸೇವಾ ಸಂಸ್ಥೆಗಳ ಮೂಲಕ)<br>2. ಗೃಹಲಕ್ಷ್ಮಿ ಯೋಜನೆ<br>3. ಸ್ತ್ರೀಶಕ್ತಿ ಯೋಜನೆ<br><br>**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**<br><br>ಮಹಿಳಾ ಸ್ವ-ಉದ್ಯೋಗ ಮತ್ತು ಆರ್ಥಿಕ ಸಹಾಯಕ್ಕಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು **ಅನುಬಂಧ-5** ರಲ್ಲಿ ಒದಗಿಸಿದೆ. |

**ಸಂಖ್ಯೆ:** ಮಮಇ 364 ಐಸಿಡಿ 2025

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

ಅನುಬಂಧ-1

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರ ಚುಕ್ಕೆ ಗುರುತಿಲ್ಲದ
ಪ್ರಶ್ನೆ ಸಂಖ್ಯೆ: 1616 ಕ್ಕೆ ಮಾಹಿತಿ

**ರಾಜ್ಯದಲ್ಲಿನ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಪೌಷ್ಠಿಕತೆ ಶಿಕ್ಷಣ ಹಾಗೂ ಸಬಲೀಕರಣಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನ ಗೊಳಿಸುತ್ತಿರುವ ಯೋಜನೆಗಳು ಮತ್ತು ಅವುಗಳ ಪ್ರಗತಿ ವಿವರ:**

1. **ಗೃಹಲಕ್ಷ್ಮಿ ಯೋಜನೆ:-** ಗೃಹಲಕ್ಷ್ಮಿ ಯೋಜನೆಯಡಿ ಆಗಸ್ಟ್-2023ರ ಮಾಹೆಯಿಂದ ಈವರೆಗೆ ಒಟ್ಟು 23 ಕಂತು (ಪ್ರತಿ ಫಲಾನುಭವಿಗೆ ರೂ. 2,000/-ರಂತೆ ಒಟ್ಟು ರೂ.46,000/-)ಗಳ ಧನಸಹಾಯ ಪಾವತಿ ಮಾಡಲಾಗಿದೆ. 24ನೇ ಕಂತಿನ ಧನಸಹಾಯ ಪಾವತಿಗೆ ಕ್ರಮಕೈಗೊಳ್ಳಲಾಗುತ್ತಿದೆ. ಯೋಜನೆಯಡಿ ಈವರೆಗೂ ರೂ.54,987.98 ಕೋಟಿಗಳ ಧನಸಹಾಯವನ್ನು ಫಲಾನುಭವಿಗಳ ಖಾತೆಗೆ DBT ಮೂಲಕ ಪಾವತಿಸಲಾಗಿದೆ.

2. **ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ:-**

| **ಫಲಾನುಭವಿಗಳು** | **ಒದಗಿಸಲಾಗುತ್ತಿರುವ ಸೇವೆ (ವಾರ್ಷಿಕ 300 ದಿನಗಳಿಗೆ) ಪ್ರತಿ ದಿನಕ್ಕೆ** | **ಯೋಜನೆಗಳ ಪ್ರಗತಿ** |
|---|---|---|
| 6 ತಿಂಗಳಿಂದ 3 ವರ್ಷದ ಮಕ್ಕಳು | "ಪುಷ್ಟಿ" (THR) (ನ್ಯೂಟ್ರಿಮಿಕ್ಸ್ ಪುಡಿ), ಬೆಲ್ಲ | 1627179 ಮಕ್ಕಳು |
| 3 ರಿಂದ 6 ವರ್ಷದ ಮಕ್ಕಳು | ಬೆಳಗಿನ ಉಪಹಾರ ಮಿಲೆಟ್ ಲಡ್ಡು,<br>ಬಿಸಿಯೂಟ – ಅನ್ನ ಸಾಂಬಾರ್ ತಿಂಗಳಲ್ಲಿ 12 ದಿನ,<br>ಉಪ್ಪಿಟ್ಟು ತಿಂಗಳಲ್ಲಿ 9 ದಿನ<br>ರವಾ ಪಾಯಸ ತಿಂಗಳಲ್ಲಿ 4 ದಿನ | 1281669 ಮಕ್ಕಳು |
| ಗರ್ಭಿಣಿ ಮತ್ತು ಬಾಣಂತಿಯರಿಗೆ ಮಾತೃಪೂರ್ಣ ಯೋಜನೆ | ಸರ್ಕಾರದ ಆದೇಶ ದಿ:18-08-2025 ರನ್ವಯ ಮಾತೃಪೂರ್ಣ ಯೋಜನೆಯಡಿ ಈ ಕೆಳಕಂಡ ಆಹಾರ ಪದಾರ್ಥಗಳನ್ನು ಫಲಾನುಭವಿಗಳಿಗೆ ಮನೆಗೆ (THR) ವಿತರಿಸಲಾಗುತ್ತಿದೆ.<br><br>ಅಕ್ಕಿ 1000 ಗ್ರಾಂ, ಗೋದಿ 750 ಗ್ರಾಂ., ಸಿರಿಧಾನ್ಯದ ಲಡ್ಡು ಮಿಶ್ರಣ 1800.00 ಗ್ರಾಂ, ತೊಗರಿ ಬೇಳೆ/ ಹೆಸರು ಕಾಳು/ ಮಸೂರು ಬೆಳೆ/ಕಡ್ಲೆ ಬೆಳೆ 250 ಗ್ರಾಂ, ಸಾಂಬರ್ ಮಸಾಲ 125.00 ಗ್ರಾಂ, ತಿಂಗಳಿಗೆ 25 ಮೊಟ್ಟೆ ಹಾಗೂ 375 ಗ್ರಾಂ ಹಾಲಿನ ಪುಡಿ, 125 ಗ್ರಾಂ ಸಕ್ಕರೆ. | ಗರ್ಭಿಣಿ-356241<br>ಬಾಣಂತಿಯರು-283721 |
| ಪ್ರಾಯಪೂರ್ವ ಬಾಲಕಿಯರ ಯೋಜನೆ<br>14 -18 ವರ್ಷದೊಳಗಿನ ಕಿಶೋರಿಯರು<br>(ರಾಯಚೂರು & ಯಾದಗಿರಿ ಜಿಲ್ಲೆಗಳು ಮಾತ್ರ) | ಅಕ್ಕಿ 1000 ಗ್ರಾಂ, ಗೋದಿ 750 ಗ್ರಾಂ., ಸಿರಿಧಾನ್ಯದ ಲಡ್ಡು ಮಿಶ್ರಣ 1800.00 ಗ್ರಾಂ, ತೊಗರಿ ಬೇಳೆ / ಹೆಸರು ಕಾಳು / ಮಸೂರು ಬೆಳೆ/ ಕಡ್ಲೆ ಬೆಳೆ 250 ಗ್ರಾಂ, ಸಾಂಬರ್ ಮಸಾಲ 125.00 ಗ್ರಾಂ ಈ ಆಹಾರ ಪದಾರ್ಥಗಳನ್ನು ಮನೆಗೆ (THR) ವಿತರಿಸಲಾಗುತ್ತಿದೆ. | ಪ್ರಾಯಪೂರ್ವ ಬಾಲಕಿಯರು-68180 |

3. **ಕ್ಷೀರಭಾಗ್ಯ ಯೋಜನೆ:-**

- ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 15 ಗ್ರಾಂ ಹಾಲಿನ ಪುಡಿ ಮತ್ತು 05 ಗ್ರಾಂ ಸಕ್ಕರೆಯನ್ನು ನೀಡಲಾಗುತ್ತಿದೆ.
- 6 ತಿಂಗಳಿಂದ 6 ವರ್ಷದ ತೀವ್ರ ಮತ್ತು ಸಾಧಾರಣಾ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಹೆಚ್ಚುವರಿಯಾಗಿ 20ಗ್ರಾಂ ಹಾಲಿನ ಪುಡಿ ಹಾಗೂ 5ಗ್ರಾಂ ಸಕ್ಕರೆಯನ್ನು ಮನೆಗೆ ವಿತರಿಸಲಾಗುತ್ತಿದೆ.

4. **ಸೃಷ್ಟಿ ಯೋಜನೆ:-**

- ಈ ಯೋಜನೆಯಡಿ 3 ರಿಂದ 6 ವರ್ಷದ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ ಮತ್ತು ಸಾಧಾರಣಾ ಅಪೌಷ್ಠಿಕ ಮಕ್ಕಳಿಗೆ ವಾರಕ್ಕೆ 3 ದಿನ ಮೊಟ್ಟೆ ನೀಡಲಾಗುತ್ತಿದೆ.
- 3 ರಿಂದ 6 ವರ್ಷದ ತೀವ್ರ ಮತ್ತು ಸಾಧಾರಣಾ ಅಪೌಷ್ಠಿಕ ಮಕ್ಕಳಿಗೆ ವಾರಕ್ಕೆ 5 ದಿನ ಮೊಟ್ಟೆ ನೀಡಲಾಗುತ್ತಿದೆ.
- ಮೊಟ್ಟೆ ಸೇವಿಸದ ಮಕ್ಕಳಿಗೆ 6 ದಿನ ಹಾಲು ನೀಡಲಾಗುತ್ತಿದೆ.

5. **ಶಾಲಾ ಪೂರ್ವ ಶಿಕ್ಷಣ ಕಿಟ್:-** 2024-25 ನೇ ಸಾಲಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಪ್ರತಿ ಅಂಗನವಾಡಿ ಕೇಂದ್ರಕ್ಕೆ ಘಟಕ ವೆಚ್ಚ ರೂ.3000/-ಗಳಂತೆ 69,919 ಮುಖ್ಯ ಹಾಗೂ ಮಿನಿ ಅಂಗನವಾಡಿ ಕೇಂದ್ರಗಳಿಗೆ ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳನ್ನು ಒದಗಿಸಲಾಗಿದೆ. ಈ ಶಾಲಾಪೂರ್ವ ಶಿಕ್ಷಣ ಕಿಟ್ ನಲ್ಲಿ ಒದಗಿಸಲಾದ ಆಟಿಕೆಗಳು, ಬರವಣಿಗೆ ಪುಸ್ತಕಗಳು, ಫ್ಲಾಶ್ ಕಾರ್ಡುಗಳ ಮೂಲಕ ಮಕ್ಕಳಲ್ಲಿ ಕಲಿಕೆಯ ಗುಣಮಟ್ಟವನ್ನು ಉತ್ತಮಪಡಿಸಲಾಗುತ್ತಿದೆ.

6. **ಮೆಡಿಸಿನ್ ಕಿಟ್:-** ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಆಡಳಿತ ವೆಚ್ಚದಡಿ, ಪ್ರತಿ ಅಂಗನವಾಡಿ ಕೇಂದ್ರಕ್ಕೆ ಘಟಕ ವೆಚ್ಚ ರೂ 1,500/-ರಂತೆ ಮುಖ್ಯ ಅಂಗನವಾಡಿ ಕೇಂದ್ರಗಳಿಗೆ ಹಾಗೂ ರೂ.750/-ರಂತೆ ಮಿನಿ ಅಂಗನವಾಡಿ ಕೇಂದ್ರಗಳು ಸೇರಿ ಒಟ್ಟು 69,919 ಅಂಗನವಾಡಿ ಕೇಂದ್ರಗಳಿಗೆ ಮೆಡಿಸಿನ್ ಕಿಟ್‌ಗಳನ್ನು ಒದಗಿಸಲಾಗಿದೆ. ಸದರಿ ಮೆಡಿಸಿನ್ ಕಿಟ್‌ನಲ್ಲಿ ಒದಗಿಸಲಾದ ಔಷಧಿಗಳನ್ನು ಅಂಗನವಾಡಿ ಕೇಂದ್ರಗಳ ಮಕ್ಕಳ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಗೆ ಬಳಕೆ ಮಾಡಲಾಗುತ್ತಿದೆ.

7. **ಪ್ರಾಯಪೂರ್ವ ಬಾಲಕಿಯರ ಯೋಜನೆ:-** ಸಬಲ ಯೋಜನೆಯನ್ನು **"ಪ್ರಾಯಪೂರ್ವ ಬಾಲಕಿಯರ ಯೋಜನೆ"** ಯನ್ನಾಗಿ ಹೆಸರಿಸಿ, ಮಹತ್ವಾಕಾಂಕ್ಷಿ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಉದ್ದೇಶವು 14-18 ವರ್ಷದ ಎಲ್ಲಾ ಪ್ರಾಯಪೂರ್ವ ಬಾಲಕಿಯರನ್ನು ಸಬಲರನ್ನಾಗಿ ಮಾಡಲಾಗುತ್ತಿದೆ.

8. **ಕೇಂದ್ರ ಸರ್ಕಾರದ ಒನ್ ಸ್ಟಾಪ್ ಸೆಂಟರ್ (ಸಖಿ):** ಕೇಂದ್ರದ ಪಾಲು : 100% - ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ಸಮಗ್ರ ಸೇವೆಗಳನ್ನು ಒಂದೇ ಸೂರಿನಡಿ ನೀಡಲಾಗುತ್ತಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 40 ಒನ್ ಸ್ಟಾಪ್ ಸೆಂಟರ್ ಕಾರ್ಯನಿರ್ವಹಿಸುತ್ತಿವೆ. 2025-26ನೇ ಸಾಲಿನಲ್ಲಿ ಒಟ್ಟು 6050 ಮಹಿಳೆಯರು ಸಮಾಲೋಚನಾ ಸೇವೆಯನ್ನು ಪಡೆದಿರುತ್ತಾರೆ.

9. **ಮಹಿಳಾ ಸಹಾಯವಾಣಿ – 181:** ಮಹಿಳೆಯರಿಗೆ ಮಾಹಿತಿಯನ್ನು ನೀಡಲು, ದೌರ್ಜನ್ಯ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒದಗಿಸುವ ನಿಟ್ಟಿನಲ್ಲಿ ಮಹಿಳಾ ಸಹಾಯವಾಣಿ-181 ಎಂಬ ಉಚಿತ ದೂರವಾಣಿ ಸೇವೆಯನ್ನು ಕಾರ್ಯಗತಗೊಳಿಸಿ ತುರ್ತು ಪ್ರತಿಕ್ರಿಯೆ ಬೆಂಬಲ ವ್ಯವಸ್ಥೆ (ERSS)-112 ರೊಂದಿಗೆ ಸಂಯೋಜಿಸಲು WCD Control Room ನ್ನು C-DAC ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸೇವೆಯನ್ನು ದಿನದ 24X7 ಗಂಟೆಗಳು ರಾಜ್ಯಾದ್ಯಂತ ಒದಗಿಸಲಾಗುತ್ತಿದೆ. 2025-26ನೇ ಸಾಲಿನಲ್ಲಿ ಒಟ್ಟು 1,14,104 ಕರೆಗಳಿಗೆ ಪ್ರತಿಕ್ರಿಯಿಸಲಾಗಿದೆ.

10. **ಶಕ್ತಿ ಸದನ (ಸ್ವಾಧಾರ ಗೃಹ ಮತ್ತು ಉಜ್ವಲ):** ಗೃಹ ಯೋಜನೆಯ ಮುಖ್ಯ ಉದ್ದೇಶ ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರನ್ನಾಗಿ ಮಾಡುವುದಾಗಿರುತ್ತದೆ. ಉಜ್ವಲ ಯೋಜನೆಯು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು ಮತ್ತು ಪುನರ್ವಸತಿ ಕಲ್ಪಿಸಲು ಹಾಗೂ ಇವರುಗಳ ಕುಟುಂಬದವರೊಂದಿಗೆ ಪುನರ್‌ವಿಲೀನಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ.

ಈ ಎರಡು ಯೋಜನೆಗಳನ್ನು ಸಂಯೋಜಿಸಿ, 50 ನಿವಾಸಿಗಳಿಗೆ ವಾಸ್ತವ್ಯ ಮತ್ತು ವಿವಿಧ ಸೌಲಭ್ಯ ನೀಡಲಾಗುವ 'ಶಕ್ತಿ ಸದನ' - ಸಮಗ್ರ ಪರಿಹಾರ ಮತ್ತು ಪುನರ್ವಸತಿ ಗೃಹಗಳನ್ನು ಸ್ವಯಂ ಸೇವಾ

11. **ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ**:ಈ ಯೋಜನೆಯಡಿಯಲ್ಲಿ ಗರ್ಭಿಣಿ/ ಬಾಣಂತಿಯರ ಆರೋಗ್ಯ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ, ಗರ್ಭಿಣಿ/ ಬಾಣಂತಿಯರಿಗೆ ಆರ್ಥಿಕ ಪ್ರೋತ್ಸಾಹ ಧನವನ್ನು ನೇರ ನಗದು ವರ್ಗಾವಣೆ (DBT) ಮುಖಾಂತರ ನೀಡಲಾಗುವುದು. ಸದರಿ ಯೋಜನೆಯಡಿ ಮೊದಲ ಮಗುವಿಗೆ ರೂ.5000/-ಗಳನ್ನು 2 ಕಂತುಗಳಲ್ಲಿ (1ನೇ ಕಂತು ರೂ.3000/-ಗಳನ್ನು 06 ತಿಂಗಳ ನಂತರ ಮತ್ತು 2ನೇ ಕಂತು ರೂ.2000/-ಗಳನ್ನು ಹೆರಿಗೆ ನಂತರ ಮಗುವಿಗೆ ಮೊದಲ ಸುತ್ತಿನ ಚುಚ್ಚುಮದ್ದು & ಮಗುವಿನ ಜನನ ಪ್ರಮಾಣ ಪತ್ರ ಒದಗಿಸಿದ ನಂತರ) ಪಾವತಿಸಲಾಗುತ್ತದೆ. 2ನೇ ಮಗು ಹೆಣ್ಣು ಮಗುವಾಗಿದ್ದಲ್ಲಿ ರೂ.6000/- ಗಳನ್ನು 1 ಕಂತಿನಲ್ಲಿ ಹೆರಿಗೆಯ ನಂತರ ಪಾವತಿಸಲಾಗುತ್ತದೆ. 2025-26ನೇ ಸಾಲಿನಲ್ಲಿ ಒಟ್ಟು 2,17,919 ಫಲಾನುಭವಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗಿದೆ.

12. **ಮಹಿಳಾ ಸಬಲೀಕರಣ ಘಟಕ**: ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಆಂತರಿಕ ಸಮನ್ವಯತೆಯಲ್ಲಿ ಇಲಾಖೆಗಳೊಂದಿಗೆ ಕಾರ್ಯನಿರ್ವಹಿಸುವುದು. ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳುವ ವಾತಾವರಣವನ್ನು ಸೃಜಿಸಿ ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದೊಂದಿಗೆ ರಾಜ್ಯ ಮಟ್ಟದಲ್ಲಿ ಒಂದು ರಾಜ್ಯ ಮಹಿಳಾ ಸಬಲೀಕರಣ ಘಟಕವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ 31 ಜಿಲ್ಲಾ ಮಹಿಳಾ ಸಬಲೀಕರಣ ಘಟಕಗಳನ್ನು (ಜಿಲ್ಲೆಗೆ 1 ರಂತೆ) ಸ್ಥಾಪಿಸಲಾಗಿದೆ.

13. **ಸಖಿ ನಿವಾಸ (ಕೇಂದ್ರ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ):** ಮಹಿಳೆಯರಿಗೆ ಉದ್ಯೋಗಾವಕಾಶ ಇರುವ ನಗರ, ಅರೆ-ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಉದ್ಯೋಗಸ್ಥ ಮಹಿಳೆಯರಿಗೆ ಸುರಕ್ಷಿತ ಮತ್ತು ಅನುಕೂಲಕರವಾಗಿ ನೆಲೆಗೊಂಡಿರುವ ವಸತಿ ಸೌಕರ್ಯಗಳ ಲಭ್ಯತೆಯನ್ನು ಉತ್ತೇಜಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಪ್ರಸ್ತುತ ರಾಜ್ಯದಲ್ಲಿ 58 ವಸತಿ ನಿಲಯಗಳು ಕಾರ್ಯನಿರ್ವಹಿಸುತ್ತಿದೆ. 2025-26ನೇ ಸಾಲಿನಲ್ಲಿ ಒಟ್ಟು 2,973 ಮಹಿಳೆಯರು ವಾಸ್ತವ್ಯ ಪಡೆದಿರುತ್ತಾರೆ.

14. **ಸಾಂತ್ವನ:** ವಿವಿಧ ರೀತಿಯ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಮಾಲೋಚನೆ ಮತ್ತು ಅಗತ್ಯ ನೆರವನ್ನು ದಿನದ 24X7 ಗಂಟೆಗಳು ಸಂಕಷ್ಟಕ್ಕೊಳಗಾದ ಮಹಿಳೆಯರಿಗೆ ನೆರವನ್ನು ಒದಗಿಸುತ್ತದೆ.ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯವನ್ನು ಒದಗಿಸಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರನ್ನಾಗಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ರಾಜ್ಯದಲ್ಲಿ 179 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2025-26ನೇ ಸಾಲಿನಲ್ಲಿ ಒಟ್ಟು 13,058 ಮಹಿಳೆಯರು ಸಮಲೋಚನಾ ಸೇವೆಯನ್ನು ಪಡೆದಿರುತ್ತಾರೆ.

15. **ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006:** ರಾಜ್ಯವು 2006 ರಿಂದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯನ್ನು ಅನುಷ್ಠಾನಗೊಳಿಸುತ್ತಿದ್ದು ಇದು ಮುಖ್ಯವಾಗಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಉದ್ದೇಶದಿಂದ, ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಕಾಯ್ದೆಯ ಅನುಷ್ಠಾನದಲ್ಲಿ ಸಹಕರಿಸಲು ರಾಜ್ಯಾದ್ಯಂತ 116 ಸ್ವಯಂ ಸೇವಾ ಸಂಸ್ಥೆಗಳನ್ನು ಸೇವಾ ಸಂಸ್ಥೆಗಳೆಂದು ಗುರುತಿಸಲಾಗಿದೆ. ಇದರೊಂದಿಗೆ ಕೌಟುಂಬಿಕ ಹಿಂಸೆಗೊಳಗಾದ ಮಹಿಳೆಯರಿಗೆ ಆಶ್ರಯ ಹಾಗೂ ಸಮಾಲೋಚನೆಯನ್ನು ಕಲ್ಪಿಸಲು 42 ಶಕ್ತಿ ಸದನ ಕೇಂದ್ರಗಳು ಹಾಗೂ 179 ಸಾಂತ್ವನ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನೊಂದ ಮಹಿಳೆಯರಿಗೆ ಉಚಿತ ಕಾನೂನು ನೆರವನ್ನು ಒದಗಿಸಲಾಗುತ್ತಿದೆ.

ರಾಜ್ಯದಲ್ಲಿ ಪ್ರಸ್ತುತ ಒಟ್ಟು 47 ತಾಲ್ಲೂಕುಗಳಲ್ಲಿ ಮಾತ್ರ ಸಂರಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ತಾಲ್ಲೂಕುಗಳಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳೇ, ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿ 31 ಜಿಲ್ಲೆಗಳ ಉಪನಿರ್ದೇಶಕರು ಸಂರಕ್ಷಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2025-26ನೇ ಸಾಲಿನಲ್ಲಿ ಒಟ್ಟು 6177 ಪ್ರಕರಣಗಳು ದಾಖಲಾಗಿರುತ್ತದೆ.

16. **ಉದ್ಯೋಗಸ್ಥ ಮಹಿಳಾ ವಸತಿ ನಿಲಯ ಯೋಜನೆ:** ಮಹಿಳಾ ಮತ್ತು ಮಕ್ಕಳ ಇಲಾಖೆಯ ವತಿಯಿಂದ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ದಕ್ಷಿಣ ಕನ್ನಡ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ 23 ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭಿಸಲಾಗಿದೆ. ಗಾರ್ಮೆಂಟ್ಸ್, ಕೈಗಾರಿಕೆಗಳು ಮತ್ತು ಇತರ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ದುಡಿಯುವ ಮಹಿಳೆಯರಿಗೆ ಆದ್ಯತೆ ಮೇರೆಗೆ ಸೌಲಭ್ಯ ನೀಡಲಾಗುತ್ತಿದೆ. 2025-26ನೇ ಸಾಲಿನಲ್ಲಿ ಒಟ್ಟು 1,148 ಮಹಿಳೆಯರು ವಾಸ್ತವ್ಯ ಪಡೆದಿರುತ್ತಾರೆ.

17. **ಭಾಗ್ಯಲಕ್ಷ್ಮಿ -ಸುಕನ್ಯಾ ಸಮೃದ್ಧಿ ಖಾತೆ ಯೋಜನೆ:** ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ 2ಹೆಣ್ಣು ಮಕ್ಕಳಿಗೆ ಆರ್ಥಿಕ ಸೌಲಭ್ಯವನ್ನು ನೀಡಲಾಗುವುದು. ಹೆಣ್ಣು ಮಗು ಜನಿಸಿದ 2 ವರ್ಷಗಳ ವರೆಗೆ ನೋಂದಣಿ ಮಾಡಲು ಕಾಲಾವಕಾಶವಿರುತ್ತದೆ. ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ ಪ್ರತಿ ಮಗುವಿನ ಹೆಸರಿನಲ್ಲಿ ವಾರ್ಷಿಕ ರೂ.3000/-ರಂತೆ 15 ವರ್ಷಗಳವರೆಗೆ ಒಟ್ಟು ರೂ. 45,000/-ಗಳನ್ನು ಅಂಚೆ ಇಲಾಖೆಯ ಮೂಲಕ ಠೇವಣಿ ಹೂಡಲಾಗುತ್ತದೆ. 21 ವರ್ಷ ಅವಧಿ ಪೂರ್ಣಗೊಂಡ ನಂತರ ಅಂದಾಜು ಪರಿಪಕ್ವ ಮೊತ್ತ ರೂ.1.27ಲಕ್ಷ ನೀಡಲಾಗುತ್ತದೆ. 10ನೇ ತರಗತಿ ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಖಾತೆಯಲ್ಲಿರುವ ಮೊತ್ತದ ಶೇ.50ರಷ್ಟು ಭಾಗವನ್ನು ಹಿಂಪಡೆಯಲು ಅವಕಾಶವಿರುತ್ತದೆ. ಸದರಿ ಯೋಜನೆಯಡಿ ಇಲ್ಲಿಯವರೆಗೆ 7,32,784 ಫಲಾನುಭವಿಗಳ ಹೆಸರಿನಲ್ಲಿ ಖಾತೆ ತೆರೆಯಲಾಗಿರುತ್ತದೆ.

18. **ಸ್ತ್ರೀಶಕ್ತಿ ಯೋಜನೆ:-** ಸ್ತ್ರೀಶಕ್ತಿ ಯೋಜನೆಯಡಿ ಸ್ವಸಹಾಯ ಗುಂಪುಗಳ ಮೂಲಕ ಮಹಿಳೆಯರ ಸಬಲೀಕರಣಕ್ಕಾಗಿ ಸಮಾಜದ ಬಡ ಕುಟುಂಬದ ಸಮಾನ ಮನಸ್ಸಿನ ಪರಸ್ಪರ ವಿಶ್ವಾಸದಿಂದ ಕೂಡಿದ 15-20 ಮಹಿಳೆಯರನ್ನು ಒಟ್ಟು ಸೇರಿಸಿ 1,65,960 ಲಕ್ಷ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ಹಂತಹಂತವಾಗಿ ರಚಿಸಲಾಗಿದ್ದು ಸದರಿ ಗುಂಪುಗಳಲ್ಲಿ 25.86 ಲಕ್ಷ ಮಹಿಳಾ ಸದಸ್ಯರು ಸಂಘಟಿತರಾಗಿರುತ್ತಾರೆ. ಸದರಿ ಸದಸ್ಯರಿಗೆ ಯೋಜನೆಯಡಿ

ಅ) ಸುತ್ತುನಿಧಿ
ಆ) ಹೆಚ್ಚುವರಿ ಸುತ್ತುನಿಧಿ
ಇ) ಆದಾಯೋತ್ಪನ್ನ ಚಟುವಟಿಕೆಗಳಿಗೆ ಪ್ರೋತ್ಸಾಹ ಧನ ಮತ್ತು
ಈ) ಅಧಿಕ ಉಳಿತಾಯ ಮಾಡಿದ ಗುಂಪುಗಳಿಗೆ ಪ್ರೋತ್ಸಾಹ ಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

2025-26ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ರೂ. 210.57 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ವೆಚ್ಚಭರಿಸಲು ಕ್ರಮ ವಹಿಸಲಾಗುತ್ತಿದೆ.

19. **ಶಿಶುಪಾಲನಾ ಕೇಂದ್ರಗಳು:** ಪ್ರತಿ ಜಿಲ್ಲೆಯ 2 ಸರ್ಕಾರಿ ಕಛೇರಿಗಳಲ್ಲಿ ಮತ್ತು ಪ್ರತಿ ಜಿಲ್ಲೆಯ 2 ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಹೆಚ್ಚು ಮಹಿಳಾ ಕಾರ್ಮಿಕರ ಸಾಂದ್ರತೆ ಇರುವ ಪ್ರದೇಶಗಳಲ್ಲಿ ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ 123 ಶಿಶುಪಾಲನಾ ಕೇಂದ್ರಗಳನ್ನು ಸ್ತ್ರೀಶಕ್ತಿ ಒಕ್ಕೂಟ/ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪ್ರಾರಂಭಿಸಲಾಗಿರುತ್ತದೆ.

20. **ಬಾಲಕಿಯರ ವಸತಿ ನಿಲಯಗಳು:-** ಹಿಂದುಳಿದ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಅನುಕೂಲವಾಗುವಂತೆ ರಾಜ್ಯದ 18 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ 35 ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ. ಸದರಿ ವಸತಿ ನಿಲಯಗಳಲ್ಲಿ ಸಂಖ್ಯಾಬಲ 2325 ಇದ್ದು, 2025-26 ನೇ ಸಾಲಿನಲ್ಲಿ 2277 ವಿದ್ಯಾರ್ಥಿಗಳು ದಾಖಲಾಗಿದ್ದು, ಸೌಲಭ್ಯ ಪಡೆಯುತ್ತಿದ್ದಾರೆ.

ಅನುಬಂಧ -2

ಶ್ರೀ ಎಂ.ನಾಗರಾಜು (ಶ್ರೀನಿವಾಸಪುರ), ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1616(1408) (ಅ) ಕ್ಕೆ ನಿಗಮಕ್ಕೆ ಸಂಬಂಧಿಸಿದ ಮಾಹಿತಿ.
ಕಳೆದ ಮೂರು ವರ್ಷಗಳಲ್ಲಿ ನಿಗಮದಿಂದ ಹಮ್ಮಿಕೊಂಡಿರುವ ಪ್ರಮುಖ ಯೋಜನೆಗಳು ಮತ್ತು ಅವುಗಳ ಪ್ರಗತಿ ವರದಿ

| ಕ್ರ. ಸಂ. | ಯೋಜನೆಯ ಹೆಸರು | 2022-23 ಭೌತಿಕ | 2023-24 ಭೌತಿಕ | 2024-25 ಭೌತಿಕ |
|---|---|---|---|---|
| 1 | ಉದ್ಯೋಗಿನಿ | 798 | 446 | 102 |
| 2 | ಚೇತನ | 653 | 520 | 199 |
| 3 | ಮಾಜಿ ದೇವದಾಸಿಯರ ಪುನರ್ವಸತಿ | 327 | 283 | 334 |
| 4 | ಧನಶ್ರೀ | 653 | 667 | 608 |
| 5 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ | 836 | 833 | 775 |
| 6 | ಕಿರುಸಾಲ | 93 | ಅನುದಾನ ಒದಗಿಸಿರುವುದಿಲ್ಲ | |
| | **ಒಟ್ಟು** | **3360** | **2749** | **2018** |

## ಅನುಬಂಧ -3

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1616ಕ್ಕೆ ಮಾಹಿತಿ

### ಕಳೆದ ಮೂರು ವರ್ಷಗಳಲ್ಲಿ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯಡಿ ಪ್ರಕರಣಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | 2022-23 | | | 2023-24 | | | 2024-25 | | | 2025-26 | | |
|---|---|---|---|---|---|---|---|---|---|---|---|---|---|
| | | ದಾಖಲಾದ ಪ್ರಕರಣಗಳ ಸಂಖ್ಯೆ | ಒಟ್ಟು ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ | ಒಟ್ಟು ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ | ಒಟ್ಟು ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಸಂಖ್ಯೆ | ಒಟ್ಟು ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
| 1 | ಬಾಗಲಕೋಟೆ | 132 | 71 | 61 | 58 | 48 | 10 | 80 | 60 | 20 | 118 | 53 | 67 |
| 2 | ಬಳ್ಳಾರಿ | 46 | 22 | 24 | 45 | 18 | 27 | 57 | 13 | 44 | 66 | 13 | 53 |
| 3 | ಬೀದರ್ | 141 | 16 | 125 | 45 | 4 | 41 | 80 | 20 | 60 | 156 | 63 | 93 |
| 4 | ಬೆಳಗಾವಿ | 148 | 94 | 54 | 163 | 146 | 17 | 353 | 95 | 258 | 337 | 81 | 239 |
| 5 | ವಿಜಯಪುರ | 192 | 79 | 113 | 314 | 20 | 294 | 157 | 11 | 146 | 207 | 67 | 140 |
| 6 | ಬೆಂಗಳೂರು ನಗರ | 1412 | 683 | 729 | 2312 | 711 | 1601 | 1929 | 710 | 1219 | 1959 | 531 | 1428 |
| 7 | ಬೆಂಗಳೂರು (ಗ್ರಾ) | 50 | 26 | 34 | 35 | 22 | 13 | 59 | 22 | 37 | 38 | 14 | 24 |
| 8 | ಚಾಮರಾಜನಗರ | 107 | 74 | 33 | 134 | 82 | 52 | 160 | 57 | 103 | 119 | 80 | 45 |
| 9 | ಚಿಕ್ಕಬಳ್ಳಾಪುರ | 63 | 46 | 17 | 56 | 40 | 16 | 282 | 271 | 11 | 30 | 23 | 7 |
| 10 | ಚಿಕ್ಕಮಗಳೂರು | 126 | 56 | 70 | 111 | 56 | 55 | 121 | 77 | 44 | 87 | 54 | 33 |
| 11 | ಚಿತ್ರದುರ್ಗ | 67 | 38 | 29 | 73 | 2 | 71 | 64 | 29 | 35 | 50 | 16 | 34 |
| 12 | ದಾವಣಗೆರೆ | 147 | 125 | 22 | 78 | 12 | 66 | 115 | 23 | 92 | 210 | 104 | 106 |
| 13 | ಧಾರವಾಡ | 258 | 158 | 100 | 503 | 437 | 66 | 490 | 70 | 420 | 126 | 109 | 17 |
| 14 | ದಕ್ಷಿಣ ಕನ್ನಡ | 280 | 177 | 103 | 280 | 177 | 103 | 239 | 153 | 86 | 335 | 115 | 220 |
| 15 | ಗದಗ | 145 | 90 | 55 | 171 | 102 | 69 | 182 | 99 | 83 | 169 | 88 | 81 |
| 16 | ಹಾಸನ | 60 | 26 | 34 | 42 | 13 | 29 | 46 | 9 | 37 | 95 | 44 | 51 |
| 17 | ಹಾವೇರಿ | 93 | 25 | 68 | 272 | 671 | 101 | 158 | 97 | 61 | 160 | 94 | 64 |
| 18 | ಕಲಬುರ್ಗಿ | 21 | 2 | 19 | 37 | 10 | 27 | 81 | 10 | 71 | 160 | 83 | 77 |
| 19 | ಕೊಡಗು | 161 | 134 | 27 | 163 | 139 | 24 | 146 | 120 | 26 | 117 | 93 | 24 |
| 20 | ಕೋಲಾರ | 180 | 162 | 18 | 117 | 92 | 25 | 47 | 13 | 34 | 57 | 17 | 40 |
| 21 | ಕೊಪ್ಪಳ | 262 | 222 | 40 | 316 | 276 | 40 | 91 | 64 | 27 | 53 | 18 | 35 |
| 22 | ಮಂಡ್ಯ | 138 | 72 | 66 | 176 | 127 | 49 | 126 | 81 | 45 | 74 | 59 | 18 |
| 23 | ಮೈಸೂರು | 454 | 338 | 116 | 380 | 324 | 56 | 618 | 385 | 233 | 90 | 29 | 61 |
| 24 | ರಾಮನಗರ | 152 | 115 | 37 | 147 | 111 | 36 | 102 | 67 | 35 | 425 | 154 | 276 |
| 25 | ರಾಯಚೂರು | 48 | 41 | 7 | 58 | 16 | 42 | 119 | 20 | 99 | 44 | 1 | 43 |
| 26 | ಶಿವಮೊಗ್ಗ | 301 | 207 | 94 | 284 | 182 | 102 | 301 | 194 | 107 | 189 | 141 | 51 |
| 27 | ತುಮಕೂರು | 244 | 146 | 98 | 282 | 205 | 77 | 254 | 193 | 61 | 151 | 101 | 50 |
| 28 | ಉಡುಪಿ | 60 | 36 | 24 | 77 | 46 | 31 | 114 | 72 | 42 | 68 | 34 | 34 |
| 29 | ಉತ್ತರ ಕನ್ನಡ | 274 | 252 | 22 | 325 | 305 | 20 | 344 | 311 | 33 | 238 | 184 | 54 |
| 30 | ವಿಜಯನಗರ | 927 | 677 | 250 | 84 | 47 | 37 | 66 | 50 | 16 | 41 | 28 | 13 |
| 31 | ಯಾದಗಿರಿ | 23 | 0 | 23 | 74 | 0 | 74 | 151 | 74 | 77 | 208 | 99 | 109 |
| | **ಒಟ್ಟು** | **6722** | **4210** | **2512** | **7712** | **4441** | **3271** | **7132** | **3470** | **3662** | **6177** | **2590** | **3587** |

ಅನುಬಂಧ - 04

ಅನುಬಂಧ-04

## ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ 31 ಜಿಲ್ಲೆಗಳಿಂದ ಕಳೆದ ಎರಡು ವರ್ಷಗಳಲ್ಲಿ ಸ್ವೀಕೃತಗೊಂಡ ಅರ್ಜಿಗಳ ವಿವರ

| ಕ್ರಸಂ | ಪ್ರಕರಣಗಳ ವಿವರ | 2023-24 | | | 2024-25 | | | 2025-26 (ಏಪ್ರಿಲ್-ಅಕ್ಟೋಬರ್ 2025 ರವರೆಗೆ) | | |
|---|---|---|---|---|---|---|---|---|---|---|
| | | ಸ್ವೀಕೃತಿ | ಮುಕ್ತಾಯ | ಚಾಲ್ತಿ | ಸ್ವೀಕೃತಿ | ಮುಕ್ತಾಯ | ಚಾಲ್ತಿ | ಸ್ವೀಕೃತಿ | ಮುಕ್ತಾಯ | ಚಾಲ್ತಿ |
| 1 | ಕೌಟುಂಬಿಕ ದೌರ್ಜನ್ಯ | 434 | 434 | 0 | 458 | 450 | 8 | 466 | 332 | 134 |
| 2 | ಲೈಂಗಿಕ ಕಿರುಕುಳ | 26 | 26 | 0 | 29 | 29 | 0 | 24 | 4 | 20 |
| | ಒಟ್ಟು | 460 | 460 | 0 | 487 | 479 | 8 | 490 | 336 | 154 |

ಚಾಲ್ತಿಯಲ್ಲಿರುವ ಪ್ರಕರಣಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲಾಗಿದ್ದು, ಅವರಿಂದ ವರದಿಗಾಗಿ ನಿರೀಕ್ಷಿಸಲಾಗುತ್ತಿದ್ದು, ತದನಂತರ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಕಾರ್ಯಕ್ಷಮತೆ:

ಆಯೋಗದಲ್ಲಿ ದಾಖಲಾಗುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅರ್ಜಿಯ ತೀವ್ರತೆಯ ಅನುಗುಣವಾಗಿ ವಿಂಗಡಿಸಿ, ಸಮಾಲೋಚನೆಯ ಮುಖಾಂತರ ಇತ್ಯರ್ಥಪಡಿಸುವಂತಹ ಅರ್ಜಿಗಳನ್ನು ಸಮಾಲೋಚನೆಗೆ ಒಳಪಡಿಸಲಾಗುತ್ತಿದ್ದು, ರಕ್ಷಣೆಗೆ ಸಂಬಂಧಿಸಿದಂತೆ ಪೊಲೀಸ್ ಆಯುಕ್ತರು, ಉಪ ಪೊಲೀಸ್ ಆಯುಕ್ತರು, ಪೊಲೀಸ್ ಅಧೀಕ್ಷಕರು, ಪೊಲೀಸ್ ಇನ್ಸ್‌ಪೆಕ್ಟರ್ ಇವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಅಂದರೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸಾರಿಗೆ ಇಲಾಖೆ ಹಾಗೂ ಇನ್ನಿತರ ಇಲಾಖಾ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಪತ್ರ ಬರೆಯಲಾಗಿದ್ದು, ವರದಿ ಬಂದ ನಂತರ ಮುಂದಿನ ಕ್ರಮವನ್ನು ವಹಿಸಲಾಗುತ್ತದೆ.

ಸ್ವಯಂ ಪ್ರೇರಿತ ದೂರರ್ಜಿ: ಸಮೂಹ ಮಾಧ್ಯಮ ಹಾಗೂ ದಿನಪತ್ರಿಕೆಗಳಲ್ಲಿ ವರದಿಯಾಗುವ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತದೆ.

ಆಯೋಗವು ಎಲ್ಲಾ ದೂರರ್ಜಿಗಳ ಬಗ್ಗೆ ಶೀಘ್ರವಾಗಿ ಸೂಕ್ತ ಕ್ರಮಗಳನ್ನು ಕೈಗೊಂಡು, ದೂರರ್ಜಿದಾರರಿಗೆ ನ್ಯಾಯ ಒದಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿ, ಆಯೋಗದ ಕಾರ್ಯಕ್ಷಮತೆಯನ್ನು ವೃದ್ಧಿಸಿಕೊಂಡಿದೆ.

ಕಾರ್ಯದರ್ಶಿ,

ಕ.ರಾ.ಮ.ಆ., ಬೆಂಗಳೂರು.

ಅನುಬಂಧ-05

**ಶ್ರೀ. ಎಂ.ನಾಗರಾಜು (ಶ್ರೀನಿವಾಸಪುರ), ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1616(1408) (ಅ) ಮತ್ತು (ಇ)ಕ್ಕೆ ನಿಗಮಕ್ಕೆ ಸಂಬಂಧಿಸಿದ ಮಾಹಿತಿ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಆರ್ಥಿಕ ಸಹಾಯಕ್ಕಾಗಿ 2025-26ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿ.**

1. **ಉದ್ಯೋಗಿನಿ ಯೋಜನೆ:** ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನವನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಕನಿಷ್ಟ ರೂ.1.00 ಲಕ್ಷದಿಂದ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇಕಡ 50 ರಷ್ಟು, ಗರಿಷ್ಠ ರೂ.1,50,000/-ಗಳನ್ನು ನೀಡಲಾಗುತ್ತದೆ. ಕುಟುಂಬದ ವಾರ್ಷಿಕ ಆದಾಯದ ಗರಿಷ್ಟ ಮಿತಿ ರೂ.2.00 ಲಕ್ಷಗಳಿಗೆ ಮಿತಿಗೊಳಿಸಿದೆ.

   ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚ ರೂ.1.00 ಲಕ್ಷದಿಂದ ರೂ.3.00 ಲಕ್ಷಗಳವರೆಗೆ, ಶೇ.30ರಷ್ಟು ಅಥವಾ ಗರಿಷ್ಠ ರೂ.90,000/-ಗಳ ಸಹಾಯಧನ ನೀಡಲಾಗುವುದು. ಸಾಮಾನ್ಯ ವರ್ಗದವರ ಕುಟುಂಬದ ವಾರ್ಷಿಕ ಆದಾಯವನ್ನು ಗರಿಷ್ಠ ರೂ.1.50 ಲಕ್ಷಗಳಿಗೆ ಮಿತಿಗೊಳಿಸಿದೆ.ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ವರ್ಷ ಮೇಲ್ಪಟ್ಟು ಗರಿಷ್ಠ 55 ವರ್ಷದೊಳಗಿರಬೇಕು. ಬ್ಯಾಂಕುಗಳಿಂದ ಸಾಲ ಮಂಜೂರಾತಿ ನಂತರ ಇಡಿಪಿ ತರಬೇತಿಯೊಂದಿಗೆ ಸಹಾಯಧನವನ್ನು ಸಂಬಂಧಪಟ್ಟ ಬ್ಯಾಂಕ್ ಬ್ರಾಂಚುಗಳಿಗೆ DBT ಮುಖಾಂತರ ನಿಗಮದಿಂದ ಬಿಡುಗಡೆಗೊಳಿಸಲಾಗುವುದು.

   ಫಲಾನುಭವಿಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡಲಾಗುತ್ತದೆ.

2. **ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:** ಲಿಂಗತ್ವ ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

3. **ಚೇತನ ಯೋಜನೆ:** ದಮನಿತ ಮಹಿಳೆಯರು (ಮಹಿಳಾ ಲೈಂಗಿಕ ಕಾರ್ಯಕರ್ತೆಯರು) ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

4. **ಧನಶ್ರೀ:** 18 ರಿಂದ 60 ವಯೋಮಾನದ ಹೆಚ್.ಐ.ವಿ ಸೋಂಕಿತ ಹಾಗೂ ಬಾಧಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನಿಗಮದಿಂದ ನೇರವಾಗಿ ರೂ.30,000/-ಗಳ ಪ್ರೋತ್ಸಾಹಧನವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುವುದು. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ.

5. **ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ:** ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರಿಗೆ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳ ಆರ್ಥಿಕ ಸೌಲಭ್ಯವನ್ನು DBT ಮುಖಾಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೀಡಲಾಗುತ್ತಿದೆ ಹಾಗೂ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ

ಅರಿವು ಮೂಡಿಸುವ ಕಾರ್ಯಕ್ರಮಗಳು, ಕಾನೂನು ಶಿಬಿರ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗಾಗಿ ಆರೋಗ್ಯ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಯನ್ನು ರಾಜ್ಯದ 15 ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹಾವೇರಿ, ಧಾರವಾಡ, ಗದಗ, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಕೊಪ್ಪಳ, ರಾಯಚೂರು, ಬಳ್ಳಾರಿ, ವಿಜಯನಗರ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ.

6. **ಮಾಜಿ ದೇವದಾಸಿ ಮಹಿಳೆಯರ ಮಾಸಾಶನ ಯೋಜನೆ:** 1993-94 ಮತ್ತು 2007-08ರಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಗುರುತಿಸಲಾದ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ 45 ವರ್ಷ ಮೀರಿದ ಮಾಜಿ ದೇವದಾಸಿ ಮಹಿಳೆಯರಿಗೆ ಕನಿಷ್ಠ ಜೀವನ ನಡೆಸಲು ಸಹಕಾರಿಯಾಗುವಂತೆ, ಮಾಸಿಕ ಮಾಸಾಶನ ರೂ.2,000/-ಗಳನ್ನು DBT ಪೋರ್ಟಲ್ ಮೂಲಕ ಸಂಬಂಧಪಟ್ಟ ಮಾಜಿ ದೇವದಾಸಿ ಮಹಿಳೆಯರಿಗೆ ಬ್ಯಾಂಕ್ ಖಾತೆಗೆ ನೇರವಾಗಿ ನೀಡಲಾಗುವುದು. **2022-23ನೇ ಸಾಲಿನಿಂದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆಗೆ ವರ್ಗಾಯಿಸಲಾಗಿದೆ.**

7. **ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ ಯೋಜನೆ:** ಕರ್ನಾಟಕ ರಾಜ್ಯದ 15 ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹಾವೇರಿ, ಧಾರವಾಡ, ಗದಗ, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ, ಕೊಪ್ಪಳ, ರಾಯಚೂರು, ಬಳ್ಳಾರಿ, ವಿಜಯನಗರ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನಿವೇಶನ ಹೊಂದಿರುವ ವಸತಿ ರಹಿತ ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆಯನ್ನು ರಾಜೀವ್ ಗಾಂಧಿ ಗ್ರಾಮೀಣಾಭಿವೃದ್ಧಿ ವಸತಿ ನಿಗಮದ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. 2018-19ನೇ ಸಾಲಿನಿಂದ ಗ್ರಾಮೀಣ ಪ್ರದೇಶದಲ್ಲಿ ರೂ.1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ.2.00 ಲಕ್ಷ ಘಟಕ ವೆಚ್ಚದಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. **2023-24ನೇ ಸಾಲಿನಿಂದ ಈ ಯೋಜನೆಯಡಿ ಅನುದಾನ ಒದಗಿಸಿರುವುದಿಲ್ಲ.**

8. **ಕಿರುಸಾಲ ಯೋಜನೆ:-** ಈ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು ಆರ್ಥಿಕವಾಗಿ ಸಬಲರಾಗಲು ಪ್ರತಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘಕ್ಕೆ ನಿಗಮದ ವತಿಯಿಂದ ರೂ.1.00 ಲಕ್ಷದಿಂದ ರೂ. 2.00 ಗಳ ಬಡ್ಡಿ ರಹಿತ ಸಾಲ ಒದಗಿಸುವುದು. **2023-24ನೇ ಸಾಲಿನಿಂದ ಈ ಯೋಜನೆಯಡಿ ಅನುದಾನ ಒದಗಿಸಿರುವುದಿಲ್ಲ.**